ದಿನಾಂಕ 07-12-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಪ್ರಮಾಣ ಪತ್ರದಲ್ಲಿ ನಮೂದಿಸಿರುವ ವಿಷಯವನ್ನು ಸಾಕ್ಷಿಗೆ ಓದಿ ಹೇಳಲಾಯಿತು, ಅದನ್ನು ಸಾಕ್ಷಿ ಸರಿ ಇದೆ ಎಂದು ಒಪ್ಪಿಕೊಂಡಿರುತ್ತಾರೆ.

ಪಾಟೀ ಸವಾಲು : ಅರ್ಜಿದಾರರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಉ ಲೇ ತೆ ನ್ಯಾ ಟೈ ಮಾ) ಓ ತಿ ಹೇ ಸ ಇದೆ.

4ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಧುಗಿರಿ.

ದಿನಾಂಕ 12-12-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ ಬಿ.ಎಂ.ಪಿ. ವಕೀಲರಿಂದ

ಜಮೀನು ಖರೀದಿಸಿ ಸುಮಾರು 37 ವರ್ಷಗಳು ಆಗಿವೆ, ನಿಖರವಾಗಿ ದಿನಾಂಕ ಹೇಳಲು ಬರುವುದಿಲ್ಲ. ನಾನು ಹೇಳಿದಂತೆ ಆದಮ್ಮ ದಾವಾ ಜಮೀನಿನ ಬಗ್ಗೆ ನನ್ನ ಹೆಸರಿಗೆ ಯಾವುದೇ ಖರೀದಿ ಪತ್ರ ಬರೆದು ಕೊಟ್ಟಿರುವುದಿಲ್ಲ ಎನ್ನುವುದು ಸರಿಯಲ್ಲ. ಅದಮ್ಮಳಿಗೆ ತಿಳಿಯದೇ ದಾವಾ ಜಮೀನಿನ ಖಾತೆಯನ್ನು ನನ್ನ ಹೆಸರಿಗೆ ವರ್ಗಾಯಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ದಾವಾ

ಜಮೀನನ್ನು ಎಂದಿಗೂ ಆದ್ಯಮ್ಮನಿಂದ ಖರೀದಿಸಿಲ್ಲ ಮತ್ತು ಅದಮ್ಮ ದಾವಾ ಜಮೀನಿನ ಸ್ವಾಧೀನತೆಯನ್ನು ನನಗೆ ವಹಿಸಿಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ದಾವಾ ಜಮೀನಿನ ಸ್ವಾಧೀನತೆಯಲ್ಲಿ ನಾನು ಎಂದಿಗೂ ಇಲ್ಲವೆನ್ನುವುದು ಸರಿಯಲ್ಲ. ದಾವಾದ ಎಲ್ಲಾ ಸ್ವತ್ತುಗಳು ಗೋವಿಂದಪ್ಪ ಇವರು ಮೃತ ಅದ್ಯಮ್ಮಳಿಗೆ ದಾನದಲ್ಲಿ ಕೊಟ್ಟಿದ್ದರು. ನಂತರ ದಾವಾದ ಎಲ್ಲಾ ಸ್ವತ್ತುಗಳು ಮೃತ ಆದ್ಯಮ್ಮ ದಿನಾಂಕಃ 6-1-2003 ರಂದು ಬುದ್ಧಿ, ಜ್ಞಾನ, ಆರೋಗ್ಯ ಸರಿ ಸ್ಥಿತಿಯಲ್ಲಿ ಅರ್ಜಿದಾರಳಾದ ಆದಿಲಕ್ಷಮ್ಮಳ ಹೆಸರಿಗೆ ನಿಪಿ.1 ರ ವಿಲ್‌ಪತ್ರ ಬರೆದು ಕೊಟ್ಟಿರುತ್ತಾಳೆ ಎನ್ನುವುದು ಸರಿಯಲ್ಲ. ಅದ್ಯಮ್ಮ ಮರಣ ಹೊಂದಿದ ನಂತರ ಅರ್ಜಿದಾರರಾದ ಆದಿಲಕ್ಷಮ್ಮ ದಾವಾದ ಎಲ್ಲಾ ಸ್ವತ್ತುಗಳ ಸ್ವಾಧೀನಾನುಭವದಲ್ಲಿ ಇದ್ದಾಳೆ ಎಂದರೆ ಸರಿಯಲ್ಲ. ದಾವಾಸ್ವತ್ತು ಪಡೆದು ಕೊಳ್ಳುವ ಉದ್ದೇಶದಿಂದ ಮೃತ ಆದ್ಯಾಮ್ಮ ದಾವಾಸ್ವತ್ತು ನನಗೆ ಮಾರಾಟ ಮಾಡಿ ಸುಮಾರು 37 ವರ್ಷಗಳ ಹಿಂದೆ ಕ್ರಯ ಪತ್ರ ಬರೆದು ಕೊಟ್ಟು ಸ್ವಾಧೀನ ನನಗೆ ಬಿಟ್ಟುಕೊಟ್ಟಿರುತ್ತಾಳೆ ಎಂದು ಮತ್ತು ನಾನೇ ದಾವಾಸ್ವತ್ತಿನ ಸ್ವಾಧೀನ ಅನುಭವದಲ್ಲಿ ಇದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು : ಅಫೀಲುದಾರರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಉ ಲೇ ತೆ ನ್ಯಾ ಟೈ ಮಾ) ಓ ತಿ ಹೇ ಸ ಇದೆ.

4ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಧುಗಿರಿ.